ಎಂದು ತನ್ನ ಸರ್ ಜೊತೆ ಮಾತು ಶುರುಮಾಡಬೇಕು ಎಂದುಕೊಂಡಳು.

ಪ್ರತೀಶಾಳ ಹೆಸರು ನೆನಪು ಮಾಡಿಕೊಂಡಿದ್ದೇ ರಂಜಿನಿಗೆ ಒಳಗೊಳಗೆ ಅವಳ ಕುರಿತು ಮತ್ತಷ್ಟು ಸಿಟ್ಟು ಬಂತು. ಇತ್ತೀಚೆಗೆ ಪ್ರತೀಶಾ, ಶಿವಶಂಕರ್ ಸರ್ ಜೊತೆ ನಗು ನಗುತ್ತಾ ಚೆಲ್ಲು ಚೆಲ್ಲಾಗಿ ಮಾತಾಡುವುದನ್ನು ಮತ್ತೆ ಮತ್ತೆ ಅವಳು ನೋಡಿದ್ದಳು. 'ಶಿವಶಂಕರ್ ಸರ್ ಜೊತೆ ಆ ಪ್ರತೀಶಾಳ ತುಂಟಾಟ ಜಾಸ್ತಿಯಾಗಿದೆ ನೋಡು. ಪಿ.ಜಿ. ಮುಗಿಯೋದ್ರೊಳಗೆ ಇವಳು ಅವರನ್ನ ಮದ್ವೆಯಾದ್ರೂ ಆಶ್ಚರ್ಯ ಇಲ್ಲ ಮಾರ್ರೆ' ಎಂದು ಕೆಲವು ಹುಡುಗ್ರು ಗುಂಪಾಗಿ ಪ್ರತೀಶಾಳ ಬಗ್ಗೆನೇ ಮಾತಾಡ್ತಾ ಛೇಡಿಸುವುದನ್ನು, ತನ್ನಿಷ್ಟದ ಸರ್ ಅವರ ಪಂಚಾತಿಕೆಗೆ ವಸ್ತುವಾಗುತ್ತಿರುವುದನ್ನು ನೋಡಿ, ರಂಜಿನಿಯ ತಾಪಮಾನ ಇನ್ನಷ್ಟು ಜಾಸ್ತಿಯಾಯ್ತು. ಪ್ರತೀಶಾಳನ್ನು ಇನ್ನಷ್ಟು ದ್ವೇಷಿಸಲು ಕ್ಯಾಂಪಸ್ಸಿನಲ್ಲಿ ಆಗಾಗ ಕೇಳುತ್ತಿದ್ದ ಕೆಲವೊಂದು ಗಾಳಿ ಸುದ್ದಿಗಳು ಕಾರಣವಾದವು.

'ಸರ್ ಅವಳ ಜೊತೆ ಜಾಸ್ತಿ ಮಾತಾಡದ ಹಾಗೆ ಮಾಡ್ಬೇಕು, ಅವಳು ಪ್ರೀತಿಸ್ತಾ ಇದ್ದಾಳೋ ಇಲ್ವೋ ಬೇರೆ ವಿಷಯ, ಆದ್ರೆ ಅವಳು ಸಿಂಗಳೀಕನ ಹಾಗೇ ಮುಸಿ ಮುಸಿ ನಗುತ್ತಾ ಸ್ಟಾಫ್ ರೂಂಗೆ ಹೋಗಿ ಮಾತಾಡುವುದನ್ನು ನೋಡ್ತಿದ್ರೆ ಎಷ್ಟು ಕಿರಿಕಿರಿಯಾಗ್ತದೆ ನಂಗೆ. ಸರ್, ಕ್ಲಾಸ್‌ನಲ್ಲಿ ಪಾಠ ಮಾಡುವಾಗಲೂ ಇವಳು ಅವರನ್ನು ಹೇಗೆ ಅರಳುಗಣ್ಣು ಬಿಟ್ಟು ತುಂಬಿಸಿಕೊಳ್ತಾ ಇರ್ತಾಳೆ, ಹಾಳಾದವಳು' ಎಂದು ಸಿಟ್ಟು ಕುದಿಯಿತು. ಪ್ರತೀಶಾಳ ವಿರುದ್ಧ ಹೇಗಾದ್ರೂ ಅವರಿಗೆ ಹೇಳಿಬಿಡ್ತೇನೆ. ಆದ್ರೆ, ನನ್ನೊಳಗಿರುವ ಭಾವನೆ ಹೇಗೆ ಹೇಳಲಿ?. 'ಸರ್, ಆದ್ರೆ, ನಾನು ಯಾವ ಹುಡುಗಿಯ ಹಾಗೂ ಅಲ್ಲ, ನನ್ನೊಳಗೆಲ್ಲಾ ನೀವೇ ತುಂಬಿದ್ದೀರಿ. ನಾನು ಹಾಡುವ ಸಂಗೀತದ ಪ್ರತೀ ರಾಗದಲ್ಲೂ ನೀವು ನನ್ನೊಳಗೆ ತುಂಬಿಸಿದ ಉಲ್ಲಾಸದ ನಾದವಿದೆ, ಚೆನ್ನಾಗಿ ಹಾಡ್ತೀಯಾ, ನಿನ್ನ ಹಾಡು ಕೇಳಿ ಕಳೆದುಹೋಗ್ತೇನೆ ನಾನು, ಸಂಗೀತಕ್ಕೆಷ್ಟು ಶಕ್ತಿ ಇದೆ, ನಿನ್ನೊಳಗಿನ ಈ ಶಕ್ತಿಯನ್ನು ಎಂದಿಗೂ ಕಳೆದುಕೊಳ್ಬೇಡ ಎಂದು ನೀವು ಕೊಟ್ಟ ಅಭಯವಿದೆ ನನ್ನೊಳಗೆ. ನಿಮ್ಮ ಮಾತು, ನಿಮ್ಮ ಸ್ಫೂರ್ತಿ, ನಿಮ್ಮ ಕನಸು, ನಿಮ್ಮ ನಗು, ನೀವು ಕಣ್ಣಲ್ಲೇ ಮಾತಾಡುವ ಬೆರಗು, ನಿಮ್ಮ ಕುಡಿನೋಟ ಇವೆಲ್ಲಾ ನನ್ನೊಳಗೆ ಎಂದೂ ಆರದ ಪ್ರಣತಿಯಂತೆ ಬೆಳಗುತ್ತಲೇ ಇದೆ. ನೀವು ನನ್ನ ಬಾಳು ಬೆಳಗುವ ಹಣತೆ ಕೂಡ ಆಗಬೇಕು' ಎಂದು ಧೈರ್ಯ ಮಾಡಿ ಹೇಳಿಬಿಡಲೇಬೇಕು ಇವತ್ತು ಎಂದು ತನ್ನೊಳಗೆ ದೃಢ ಮಾಡಿಕೊಂಡು ನಕ್ಕಳು.

'ಮೊದಲು ಫೈನಲ್ ಇಯರ್ ಕಂಪ್ಲೀಟ್ ಮಾಡು, ಸಂಗೀತದ ಕಡೆ ಧ್ಯಾನ ಕೊಡು, ಇನ್ನೂ ಚೂರು ವಯಸ್ಸಾಗಲಿ. ಆಮೇಲೆ ಮದ್ವೆ ಬಗ್ಗೆ ಯೋಚಿಸು' ಅಂತವರು ಬೈದ್ರೆ, ಬುದ್ಧಿ ಹೇಳಿದರೆ ಅಂತಂದುಕೊಂಡು– 'ಸರ್, ನಾನಿದ್ದನ್ನು ಚೆಲ್ಲು ಮನಸ್ಸಲ್ಲಿ ಯೋಚಿಸ್ತಿಲ್ಲ, ನನ್ನೊಳಗೆ ಪಕ್ವತೆ ಇದೆ, ಮನೆಯಿಂದ ದೂರ ಇದ್ದಾಳೆ. ಒಬ್ಬಳೇ ಬದುಕುವಾಗ ನಿಂಗೆ ಹೀಗೆಲ್ಲಾ ಯೋಚನೆ ಬರೋದು ಸಹಜ ಅಂತೆಲ್ಲಾ ಪ್ಲೀಸ್ ಹೇಳ್ಬೇಡಿ ಸರ್. ನಾನು ಬಾಲ್ಯದಿಂದಲೂ ಹಾಗೆ ಎಲ್ಲವನ್ನೂ ನೂರಾರು ಸಲ ಯೋಚಿಸಿಯೇ ಮಾತಾಡೋದು, ನಿಮ್ಮನ್ನು ನೂರಾರು ಸಲ ಧ್ಯಾನಿಸಿ, ಅಳೆದು, ತೂಗಿ ಈ ನಿರ್ಧಾರ ತಗೊಂಡಿದ್ದೇನೆ, ನನ್ನದು ಸಿನಿಮೀಯ ಯೋಚನೆ ಅಲ್ಲ, ಲವ್ ಗಿವ್ ಅಂತೆಲ್ಲಾ ಹೆಸರಿಡೋಕೆ ಇಷ್ಟವಿಲ್ಲ ನಂಗೆ, ನನ್ನದು ಶುದ್ಧ ಪ್ರೀತಿ, ಇದು ನನ್ನ ಬದುಕಿನ ರೀತಿಯಾಗ್ಬೇಕು, ಅದಕ್ಕೆ ನೀವೇ ನನ್ನ ಜೊತೆಯಾಗ್ಬೇಕು' ಅಂತ ದೃಢವಾಗಿ ಹೇಳಿಬಿಡುತ್ತೇನೆ ಎಂದುಕೊಂಡಳು.

ಚೆಂದ ಸ್ನಾನ ಮುಗಿಸಿ, ಮುಗಿಲ ತುಂಡಿನಂತಿರುವ ಆಕಾಶ ನೀಲಿ ಬಣ್ಣದ ಕುರ್ತಿ ಧರಿಸಿ ಸರಳವಾಗಿ ಸಿಂಗರಿಸಿಕೊಂಡು ಕನ್ನಡಿ ನೋಡಿದಳು, ಅವಳ ಕಣ್ಣೀಗ ನಗುವ ತಿಳಿಮುಗಿಲು, ಕೆನ್ನೆ ಕೆಂಪೇರಿ ನೂರಾರು ಭಾವಗಳನ್ನು ಉಕ್ಕಿಸುವ ಕಡಲು, ತಾನೇ ಮೆಚ್ಚುವಂತೆ ತುಂಬಿಕೊಂಡಳು. ಕಣ್ಣೆದುರು ತನ್ನ ಪ್ರೀತಿಯ ಸರ್ ಮುಖವನ್ನು ತಂದುಕೊಂಡು ಪುಳಕಗೊಂಡಳು.

ರಂಜಿನಿ ಹೇಳಿ ಕೇಳಿ ಪ್ರಬುದ್ಧ ಹುಡುಗಿ. ಸಾಗರದಿಂದ ಮಂಗಳೂರಿಗೆ ಬಂದು ಮನೆಯವರು ಒಬ್ಬಳೇ ರೂಮ್ ಮಾಡಿ ನಿಲ್ಲುವುದು ಬೇಡವೆಂದರೂ, 'ಇಲ್ಲ ಸಂಗೀತ ಪ್ರಾಕ್ಟೀಸ್ ಮಾಡೋಕೆ ಏಕಾಂತ ಬೇಕು' ನಂಗೆ ಎಂದು ಹಟಹಿಡಿದು ಕಾಲೇಜಿನಿಂದ ತುಸು ದೂರವಿರುವ ಕದ್ರಿಯ ಸ್ವತಂತ್ರ ಮನೆಯ ಮಹಡಿ ಕೋಣೆಯೊಂದರಲ್ಲಿ ಬದುಕುತ್ತ ಬ್ಯಾಚುಲರ್ ಜೀವನದ ಅಮೂರ್ತ ಕ್ಷಣಗಳನ್ನು ಕಳೆಯುತ್ತಿರುವ ಸೌಮ್ಯ ಹುಡುಗಿ. ಎಂ.ಎ.ಯ ಕೊನೆಯ ವರ್ಷದ